# ರಾಷ್ಟ್ರನಿರ್ಮಾಪಕ ವಿವೇಕಾನಂದ

ಡಾ. ಇ. ವಸಂತಕುಮಾರ

**ಸ್ವಾಮಿ ವಿವೇಕಾನಂದರು ಹಲವು ಶತಮಾನಗಳ ಕಾಲ ಮುಂದುವರಿಯುವಂತಹ ರಾಷ್ಟ್ರನಿರ್ಮಾಣ ಕಾರ್ಯಗಳಿಗೆ ಹೇಗೆ ಪ್ರೇರಕ ಶಕ್ತಿಯಾಗಿದ್ದಾರೆ ಎಂಬುದನ್ನು ನಿರೂಪಿಸಿರುವ ಡಾ. ಇ. ವಸಂತಕುಮಾರ ಅವರು ಬೆಂಗಳೂರಿನ ಗಾಂಧೀ ಕೃಷಿವಿಜ್ಞಾನ ಕೇಂದ್ರದಲ್ಲಿ ಸಂಖ್ಯಾಸಂಗ್ರಾಹಕ ಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ .**

**ಸ್ವಾ**ಮಿ ವಿವೇಕಾನಂದು ಹೆಸರನ್ನು ಕೇಳಿದ ಕೂಡಲೆ ನಮಗೆ ನೆನಪಾಗುವುದು, ಅವರ ಭವ್ಯ ನಿಲುವು, ಅವರ ಪೇಟ, ತಾವರೆ ಯುತೆ ಅರಳಿದ ಕಣ್ಣುಗಳು, ಎದೆಯ ಮೇಲೆ ಮಡಿಸಿದ ಕೈಗಳು, ಉಪನ್ಯಾಸಕರ ಗಂಭೀರ ಮುಖಮುದ್ರೆ ಮತ್ತು ಧೀರ ಭಂಗಿಯಿಂದ ಅವರು, "ಅಮೆರಿಕದ ನನ್ನ ಸಹೋದರ ಸಹೋದರಿಯರೇ" ಎಂದು ಚಿಕಾಗೋದ ಸರ್ವಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮದ ಪ್ರತಿನಿಧಿಯಾಗಿ ಮಾತನಾಡಿ ಕಿಕ್ಕಿರಿದು ನೆರೆದಿದ್ದ ಸಭಿಕರ ಮನಸ್ಸನ್ನು ಸೂರೆಗೊಂಡು ವಿಶ್ವವಿಖ್ಯಾತರಾದುದು. ಸಾಮಾನ್ಯವಾಗಿ ಈ ಐತಿಹಾಸಿಕ, ರೋಮಾಂಚಕ ಘಟನೆಗೆ ಹಿಂದಿನ ಮತ್ತು ನಂತರದ ಸ್ವಾಮಿ ವಿವೇಕಾನಂದರ ಜೀವನ ಮತ್ತು ಕಾರ್ಯಗಳನ್ನು ಹೆಚ್ಚು ಮಂದಿ ತಿಳಿಯಲು ಪ್ರಯತ್ನಿಸುವುದಿಲ್ಲ ಅಥವಾ ಇಚ್ಛಿಸುವುದಿಲ್ಲ. ಆ ಜೀವನ ಪ್ರಚಂಡ ಕರ್ಮದಿಂದ ಕೂಡಿದೆ. ಸ್ವಾಮೀಜಿಯವರು ಯತಿಗಳು, ಆದರೆ ರಾಜಕುಮಾರನಂತೆ ಕಾಣುವರು. ಸ್ವಾಮೀಜಿಯವರು ಸನ್ಯಾಸಿಗಳಾದರೂ ಬಹಳ ಕಷ್ಟಪಟ್ಟು ದುಡಿದರು. ಧ್ಯಾನಮಗ್ನ ಶಿವನಂತೆ ಕಾಲವನ್ನು ಕಳೆಯಲು ಅವರಿಗೆ ಇಚ್ಛೆ ಮತ್ತು ಯೋಗ್ಯತೆ ಇದ್ದರೂ ಸಹ ಸದಾ ಕಾರ್ಯೋನ್ಮುಖರಾಗಬೇಕಾಯಿತು. ಇದಕ್ಕೆ ಕಾರಣ ಅವರ ಮನಸ್ಸಿನಲ್ಲಿ ಸದಾ ತಾಂಡವವಾಡುತ್ತಿದ್ದ ಎರಡು ಆಲೋಚನೆಗಳು—ಒಂದು ಮಾನವನ ಉದ್ಧಾರ, ಎರಡು, ಭರತಖಂಡದ ಉದ್ಧಾರ. ಅನೇಕ ವೇಳೆ ಎರಡನೆಯ ಆಲೋಚನೆಯೆ ಅವರ ಬದುಕಿನುದ್ದಕ್ಕೂ ಅವರ ಮನಸ್ಸನ್ನೆಲ್ಲಾ ವ್ಯಾಪಿಸಿದ್ದಂತೆ ತೋರುವುದು. ತ್ರಿಭುವನವೇ ತೌರೂರು ಎನ್ನುವ ಯತಿಗಳ ಗುಂಪಿಗೆ ಸೇರಿದ್ದರೂ ಸ್ವಾಮೀಜಿಯವರು ತಾಯ್ನಾಡನ್ನು ಮನಸಾರೆ ಪ್ರೀತಿಸುತ್ತಿದ್ದರು. ಬಹುಶಃ ಮಾತೃಭೂಮಿಯನ್ನು ಇವರಷ್ಟು ಉತ್ಕಟವಾಗಿ ಪ್ರೀತಿಸಿದ ಸನ್ಯಾಸಿಗಳನ್ನು ಮಾನವ ಇತಿಹಾಸ ಕಂಡಿಲ್ಲವೆಂದು ತೋರುವುದು. ಸೋದರಿ ನಿವೇದಿತಾ ಸ್ವಾಮೀಜಿಯವರನ್ನು ಸ್ವಲ್ಪ ಗಾಳಿ ಬೀಸಿದರೂ ಧ್ವನಿಗೈಯುವ ಒಂದು ಅತ್ಯಂತ ಸೂಕ್ಷ್ಮವಾದ ಘಂಟೆಗೆ ಹೋಲಿಸುತ್ತಾರೆ. ಭಾರತಕ್ಕೆ ಸಂಬಂಧಿಸಿದ ಒಂದು ಸಾಮಾನ್ಯ ವಿಷಯಕ್ಕೂ ಅವರು ಸ್ಪಂದಿಸುತ್ತಿದ್ದರು.

> ಆಧುನಿಕ ಭಾರತದ ರಾಷ್ಟ್ರೀಯತೆಯ ಪಿತೃ ಎಂದು ಸ್ವಾಮಿ ವಿವೇಕಾನಂದರನ್ನು ಖಂಡಿತವಾಗಿ ಕರೆಯಬಹುದು. ಕಾರಣ ಅವರೇ ಅದನ್ನು ಬಹುಮಟ್ಟಿಗೆ ಸೃಷ್ಟಿಸಿದರು ಮತ್ತು ಅದರ ಅತ್ಯುದಾತ್ತ ಅಂಶಗಳು ಮೂರ್ತ ರೂಪವಾಗಿತ್ತು ಅವರ ಜೀವನದಲ್ಲಿ.
>
> (ಆರ್.ಜಿ. ಪ್ರಧಾನ್)
>
> **R.G.Pradhan**

## ರಾಷ್ಟ್ರನಿರ್ಮಾಣದ ಪ್ರಾರಂಭ

ಆರು ವರ್ಷಗಳ ಭಾರತದ ಪರ್ಯಟನೆ ಮತ್ತು ನಾಲ್ಕು ವರ್ಷಗಳ ವಿದೇಶ ಪ್ರವಾಸ, ಭಾರತದಲ್ಲಿ ಸ್ವಾಮೀಜಿಯವರು ಮಾಡಲು ಇಚ್ಛಿಸಿದ ಕಾರ್ಯಗಳಿಗೆ ಸಿದ್ಧತೆಯನ್ನು ನೀಡಿತ್ತು. ಸ್ವಾಮೀಜಿಯವರು ೧೮೯೭ರಲ್ಲಿ ಭಾರತಕ್ಕೆ ಹಿಂದಿರುಗಿದರು. ರಾಷ್ಟ್ರನಿರ್ಮಾಣ ಕಾರ್ಯವನ್ನು ತಡವಿಲ್ಲದೆ ಪ್ರಾರಂಭಿಸಿದರು. ಪಶ್ಚಿಮ ದೇಶಗಳಲ್ಲಿ ಧರ್ಮ, ವೇದಾಂತ, ಭಾರತದ ಹಿರಿಮೆ ಇನ್ನು ಮುಂತಾದ ವಿಷಯಗಳ ಮೇಲೆ ಮಾತನಾಡುತ್ತಿದ್ದರು. ಆದರೆ ಅವರು ಭಾರತದ ತೀರವನ್ನು ಮುಟ್ಟುತ್ತಿದ್ದಂತೆ ಅವರಿಗೆ ಕೊಲಂಬೊದಿಂದ ಆಲ್ಮೋರದವರೆಗೆ ನೀಡಲಾದ ಬಿನ್ನವತ್ತಳೆಗಳಿಗೆ ಉತ್ತರವಾಗಿ ಕೊಟ್ಟ ಉಪನ್ಯಾಸಗಳೆಲ್ಲ ಭಾರತದ ಸ್ಥಿತಿ, ಅದರ ಮುಂದಿರುವ ಸಮಸ್ಯೆಗಳು ಮತ್ತು ಅವನ್ನು ಎದುರಿಸುವ ರೀತಿ—ಇವನ್ನು ಕುರಿತಾಗಿದ್ದವು. ಭಾರತದಂತಹ ವಿಶಾಲವಾದ, ಅಪಾರ ಜನಸಂಖ್ಯೆಯುಳ್ಳ, ಬಹು ವೈವಿಧ್ಯತೆಯಿಂದ ಕೂಡಿದ ಮತ್ತು ವಿದ್ಯಾಭ್ಯಾಸ ಕನಿಷ್ಠ ಪ್ರಮಾಣದಲ್ಲಿ ಹರಡಿರುವ ದೇಶದಲ್ಲಿ ಸೇವೆಮಾಡುವುದಾಗಲಿ, ಸುಧಾರಣೆಗಳನ್ನು ಜಾರಿಗೆ ತರುವುದಾಗಲಿ ಕಠಿಣವಾದ ಕೆಲಸ. ಯಶಸ್ಸಿಗಿಂತ ವೈಫಲ್ಯ, ನಿರಾಶೆಯೇ ಹೆಚ್ಚು. ಸಂವೇದನಾಶೀಲರೂ ದ್ರಷ್ಟಾರರೂ ಆದ ಸ್ವಾಮೀಜಿಯವರು ಎರಡು ಬಗೆಯ ಕಾರ್ಯಗಳನ್ನು ಮಾಡಿದರು. ಒಂದು, ಸದ್ಯದ ಕಷ್ಟಗಳಿಗೆ ನೆರವಾಗುವುದು, ಪರಿಹಾರ ನೀಡುವುದು; ಮತ್ತೊಂದು ದೀರ್ಘಕಾಲದಲ್ಲಿ ಫಲವನ್ನು ಕೊಡುವ, ಭಾರತೀಯರು ತಮ್ಮ ಕಾಲ ಮೇಲೆ ತಾವು ನಿಂತು ಇತರ ದೇಶಗಳ ಮಧ್ಯೆ ತಲೆಯೆತ್ತಿ ತಾವು ಸಮಬಲರೆಂದು ಘೋಷಿಸುತ್ತ ಆತ್ಮ ವಿಶ್ವಾಸದಿಂದ ನಮ್ಮಲ್ಲಿರುವ ಶ್ರೇಷ್ಠವಾದುದನ್ನು ಇತರ ದೇಶಗಳಿಗೆ ನೀಡುವಂತೆ ಮಾಡುವುದು. ಮೊದಲನೆಯದು ಆವಶ್ಯಕ ಆದರೆ ಪರಿಣಾಮ ತಾತ್ಕಾಲಿಕ. ಅನೇಕ ಬಾರಿ ತಲೆದೋರಿದ ಭಯಂಕರ ಪ್ಲೇಗ್, ಕ್ಷಾಮ ಮುಂತಾದ ಪಿಡುಗುಗಳ ನಿವಾರಣೆಗೆ ಸ್ವಾಮೀಜಿಯವರು ನಿಯೋಜಿಸಿದ ಪರಿಹಾರ ಕಾರ್ಯಗಳು ಮೊದ

ಲನೆಯ ಗುಂಪಿಗೆ ಸೇರಿದವು. ಇವಕ್ಕೆ ಬಾಹ್ಯ ಪರಿಕರಗಳು ಮತ್ತು ಜನಶಕ್ತಿ ಬೇಕು. ಈ ಕೆಲಸಗಳನ್ನು ಅಲ್ಲಲ್ಲಿ ಆಗಾಗ ಮಾಡಿದರು. ಎರಡನೆ ಬಗೆಯ ಕಾರ್ಯ ಕಷ್ಟತರ, ಬಾಹ್ಯಶಕ್ತಿಯಿಂದ ಆಗದು. ಇವಕ್ಕೆ ಅಂತಃಶಕ್ತಿ ಬೇಕು. ದ್ರಷ್ಟಾರರೂ, ತಪೋಧನರೂ ಇತರರ ದುಃಖಕಷ್ಟಗಳಿಗೆ ಮಿಡಿಯುವ ಹೃದಯವುಳ್ಳವರೂ ಆದ ಮಾನವ ಶ್ರೇಷ್ಠರಿಗೆ ಇದು ಸಾಧ್ಯ. ಅಂತಹವರು ಅಪರೂಪಕ್ಕೊಮ್ಮೆ ಇಳೆಗೆ ಅವತರಿಸಿ ಭವಜೀವಿಗಳ ಉದ್ಧಾರಕ್ಕೆ ಕಾರಣವಾಗುವರು. ಸ್ವಾಮಿ ವಿವೇಕಾನಂದರು ಅಂತಹ ನರಶ್ರೇಷ್ಠರ ಗುಂಪಿಗೆ ಸೇರಿದವರು.



ಆಧುನಿಕ ಭಾರತವು ಅವರ (ವಿವೇಕಾನಂದರ) ಸೃಷ್ಟಿ ಎಂಬ ನನ್ನ ಅನಿಸಿಕೆ ತಪ್ಪಾಗಲಾರದು ಎಂದು ಭಾವಿಸುತ್ತೇನೆ.

*—ಸುಭಾಷ್‌ಚಂದ್ರ ಬೋಸ್*

ರಾಷ್ಟ್ರೋದ್ಧಾರದ ಕಾರ್ಯವನ್ನು ಅವರು ಮಾಡಿದುದು ರಾಷ್ಟ್ರ ಕುಂಡಲಿನಿಯನ್ನು ಜಾಗೃತಗೊಳಿಸುವ ಮೂಲಕ. ಮೊದಲನೆ ಬಗೆಯ ಕೆಲಸ ಅಲ್ಲಲ್ಲಿ ಹಣತೆಯನ್ನು ಹಚ್ಚುವಂತಾದರೆ, ಎರಡನೆಯದು ಮಿಂಚಿನಂತೆ ಒಮ್ಮೆಗೇ ವಿಸ್ತಾರವಾಗಿ ಪ್ರಕಾಶವನ್ನು ನೀಡುವುದು. ಅದು, ಇದ್ದಲು ಕೆಂಡವಾಗುವಂತೆ ಒಂದರಿಂದ ಮತ್ತೊಂದು ಹೊತ್ತಿಕೊಂಡು ನಿರಂತರವಾಗಿ ಮೌನವಾಗಿ ನಡೆಯುವುದು. ಈ ಕೆಲಸ ಅಸಾಧಾರಣ ವ್ಯಕ್ತಿಗಳಿಗೆ ಮಾತ್ರ ಸಾಧ್ಯ. ಇದನ್ನು ಸ್ವಾಮೀಜಿಯವರು ಹೇಗೆ ಮಾಡಿದರೆಂಬುದನ್ನು ಒಂದೊಂದಾಗಿ ಗಮನಿಸೋಣ.

## ಆಧ್ಯಾತ್ಮಿಕತೆ—ರಾಷ್ಟ್ರನಿರ್ಮಾಣದ ಅಡಿಗಲ್ಲು

ಭಾರತದ ಜನರು ದೇಶದುದ್ದಕ್ಕೂ ಬಡತನದಲ್ಲಿ ಸಿಲುಕಿದ್ದರೂ ಜನಾಂಗದ ಜೀವಾಳವಾಗಿ ಧರ್ಮ, ಆಧ್ಯಾತ್ಮಿಕತೆಗಳಿದ್ದುದನ್ನು ಸ್ವಾಮೀಜಿಯವರು ತಮ್ಮ ಪರಿವ್ರಾಜಕ ಕಾಲದಲ್ಲೇ ಕಂಡುಕೊಂಡಿದ್ದರು. ಧರ್ಮದ ಹೆಸರೆತ್ತಿದರೆ ಎಲುಬು ಗೂಡಿನಂತಿರುವ ಜನರ ಕಣ್ಣು ಮಿಂಚುತ್ತಿತ್ತು. ಇದು, ಗತವೈಭವದ ಸನಾತನ ಭಾರತ ಮತ್ತೊಮ್ಮೆ ಮೈಕೊಡವಿ ದೀರ್ಘ ನಿದ್ರೆಯಿಂದೆದ್ದು ಜಾಗೃತವಾಗಿ ಭೋರ್ಗರೆದು ಮುನ್ನುಗ್ಗುವುದೆಂದು ಸ್ವಾಮೀಜಿಯವರಿಗೆ ಸೂಚಿಸಿತು. ಇದಕ್ಕೆ ಭಾರತೀಯರು ಸನ್ನದ್ಧರಾಗಬೇಕಾದ ಅವಶ್ಯಕತೆಯನ್ನು ಸ್ವಾಮೀಜಿಯವರು ತೋರಿಸಿದರು. ಎಂತಹ ಪ್ರಚಂಡ ಇತಿಹಾಸ ಸಂಶೋಧಕರಿಗೂ ಕಂಡುಹಿಡಿಯಲಾಗದಷ್ಟು ಪ್ರಾಚೀನ ಕಾಲದಿಂದಲೂ ಭಾರತದ ಆತ್ಮ ಅಧ್ಯಾತ್ಮವಾಗಿರುವುದು. ಈಗ್ಗೆ ಕೆಲವು ಶತಮಾನಗಳಿಂದ ಪರಕೀಯರ ಆಳ್ವಿಕೆ ಮುಂತಾದ ಐತಿಹಾಸಿಕ, ಸಾಮಾಜಿಕ ಕಾರಣಗಳಿಂದ ಜನಾಂಗ ಶೋಚನೀಯ ಸ್ಥಿತಿಗೆ ಬಂದಿರುವುದು. ಪೌರುಷದ ಕೆಂಡದ ಮೇಲೆ ಮುಸುಕಿದ್ದ ಬೂದಿಯನ್ನು ಸ್ವಾಮೀಜಿಯವರು ಊದಿದರು. ಒಂದು ಕಾಲದಲ್ಲಿ ಭಾರತಮಾತೆ ತನ್ನೆಲ್ಲ ವೈಭವದಿಂದ ಕಂಗೊಳಿಸುತ್ತಿದ್ದಳು. ಪ್ರಪಂಚದ ಇತರ ಭಾಗಗಳಲ್ಲಿ ಜನರು ಅರೆನಾಗರಿಕರಾಗಿ, ನಾಗರಿಕತೆಯ ಹೆಸರನ್ನೂ ಕೇಳದಿದ್ದಾಗ ಭಾರತ ನಾಗರಿಕತೆಯ ತೊಟ್ಟಿಲಾಗಿ ಆಧ್ಯಾತ್ಮಿಕತೆಯ ಆಗರವಾಗಿತ್ತು; ಜ್ಞಾನಜ್ಯೋತಿ ವಿಶ್ವದೆಲ್ಲೆಡೆಗೆ ಭಾರತದಿಂದ ಪ್ರಸರಿಸುತ್ತಿತ್ತು. ಭಾರತೀಯರು ತಮ್ಮ ಪೂರ್ವಿಕರ ಜ್ಞಾನರಾಶಿಗೆ ಹಕ್ಕುದಾರರು. ಇದನ್ನರಿತು ಆರ್ಯ ಸಂತಾನರಾದ ನಾವು ಭಾರತಮಾತೆಯನ್ನು ಗೌರವಿಸಬೇಕು.

ಆಗಿನ ಕಾಲದ ಅನೇಕ ಉತ್ಸಾಹೀ ತರುಣರಿದ್ದರು, ಬ್ರಿಟಿಷ್ ಸರಕಾರವನ್ನು ವಿರೋಧಿಸುವುದು, ಗುಪ್ತಸೈನ್ಯವನ್ನು ಕಟ್ಟುವುದು, ಗಲಭೆ ಪ್ರತಿಭಟನೆ ವಿರೋಧ ಪ್ರತೀಕಾರ ಮುಂತಾದುವನ್ನು ಮಾಡುವುದೇ ಅವರ ಕೆಲಸವಾಗಿತ್ತು. ಆದರೆ ರಾಷ್ಟ್ರನಿರ್ಮಾಣ ರಚನಾತ್ಮಕ ಕ್ರಿಯಾತ್ಮಕ ಕೆಲಸ, ವಿರೋಧಾತ್ಮಕ ವಿನಾಶಾತ್ಮಕ ಕ್ರಿಯೆಯಲ್ಲ. ಬಿದ್ದುಹೋದ ದೇಶವನ್ನು ರಾಜಕೀಯ ಎತ್ತಿ ಕಟ್ಟಲಾರದು. ಅನೇಕ ತರುಣರು, ನಿಃಸ್ವಾರ್ಥಹೃದಯಿಗಳು ಸ್ವಾಮೀಜಿಯವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಅವರ ಕಾರ್ಯದಲ್ಲಿ ನೆರವಾಗಲು ಉತ್ಸುಕರಾಗಿದ್ದರು. ಅಂತಹವರನ್ನು ಒಂದುಗೂಡಿಸಿ ಉಚ್ಚತಮ ಆದರ್ಶಕ್ಕೆ ಬದ್ಧರಾಗುವಂತೆ ತರಪೇತನ್ನು ನೀಡಿ ರಾಷ್ಟ್ರನಿರ್ಮಾಣ ಕಾರ್ಯಕ್ಕೆ ನಿವೇದಿಸುವ ಕಾರ್ಯ ಪ್ರಾರಂಭಗೊಂಡು ನಿರ್ವಿಘ್ನವಾಗಿ ಮುಂದುವರೆಯಬೇಕಾದರೆ ಅದಕ್ಕೆ ಒಂದು ಸಂಸ್ಥೆ ಆವಶ್ಯಕ.

ದೀರ್ಘಕಾಲ ಹಗಲಿರುಳು ಚಿಂತಿಸಿ ಸ್ವಾಮೀಜಿಯವರು ಈ ನಿರ್ಣಯಕ್ಕೆ ಬಂದರು. ಏಕೆಂದರೆ ಸಂಘಗಳು ಹೊಸ ದೋಷಗಳಿಗೆ ಕಾರಣವಾಗುತ್ತವೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಸಂಘದಿಂದ ದೋಷಕ್ಕಿಂತ ಬಹುಪಾಲು ಹೆಚ್ಚು ಪ್ರಯೋಜನವಿತ್ತು. ತಮ್ಮ ಗುರುದೇವರಾದ ಶ್ರೀರಾಮಕೃಷ್ಣರ ಹೆಸರಿನಲ್ಲಿ ಮೇ ೧, ೧೮೯೭ ರಂದು ರಾಮಕೃಷ್ಣ ಮಿಷನ್ ಸಂಸ್ಥೆಯನ್ನು ಪ್ರಾರಂಭಿಸಿದರು. ಆತ್ಮನ ಮೋಕ್ಷ ಮತ್ತು ಜಗತ್ತಿನ ಹಿತ ಎಂಬ ಆದರ್ಶ ದ್ವಯಗಳನ್ನು ಸ್ವಾಮೀಜಿಯವರು ಸಂಘದ ಮುಂದೆ ಇಟ್ಟರು. ಸ್ವಾಮೀಜಿಯವರ ಕಾರ್ಯಕ್ಕೆ ತಮ್ಮ ಹೆಗಲನ್ನು ಕೊಡುವ ಮತ್ತು ತಮ್ಮ ಜೀವನವನ್ನು ಮುಡಿಪಾಗಿಡುವ ಆಶಿಷ್ಠ, ಬಲಿಷ್ಠ, ದೃಢಿಷ್ಠ ಉತ್ಸಾಹಿ

ಅವಿವಾಹಿತ ತರುಣರು ಈ ಸಂಘಕ್ಕೆ ಸೇರಿದರು. ಇವರಿಗೆ ಆದರ್ಶವಾಗಿ, ತರಪೇತನ್ನು ನೀಡಿದವರು ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರು. ಕೇವಲ ಮೋಕ್ಷವನ್ನು ಬಯಸುವವರು ಇತರರಂತೆ ಸ್ವಾರ್ಥಿಗಳಾಗುವರು.

ಆಧ್ಯಾತ್ಮಿಕ ಜೀವನದ ಅಸ್ತಿಭಾರವಿಲ್ಲದೆ ಜಗತ್ತಿನ ಹಿತವನ್ನು ಸಾಧಿಸಲು ಯತ್ನಿಸಿದರೆ ಪ್ರಪಂಚದ ಕೆಸರಿನಲ್ಲಿ ಸಿಕ್ಕಿ ದಿಕ್ಕು ಕಾಣದಾಗುವರು. ಈ ರಹಸ್ಯವನ್ನರಿತ ಸ್ವಾಮೀಜಿಯವರು ರಾಷ್ಟ್ರನಿರ್ಮಾಣ ಕಾರ್ಯವನ್ನು ಭರತಖಂಡದ ಆತ್ಮವಾದ ಆಧ್ಯಾತ್ಮದ ವಜ್ರೋಪಮ ತಳಹದಿಯ ಮೇಲೆ ಪ್ರಾರಂಭಿಸಿದರು. ಒಂದು ವ್ಯಕ್ತಿಗೆ, ಸಮಾಜಕ್ಕೆ ಜೀವನಾಡಿಯಂತಹ ಆದರ್ಶವಿರುವಂತೆ ದೇಶಕ್ಕೂ ಒಂದು ಆದರ್ಶವಿರುವುದು. ಭಾರತದ ಆದರ್ಶ, ಧರ್ಮ, ಆಧ್ಯಾತ್ಮಿಕತೆ. ಅದೇ ಪ್ರಪಂಚಕ್ಕೆ ಅದು ನೀಡುವ ಕೊಡುಗೆ. ಅದನ್ನು ಬಿಟ್ಟರೆ ಭಾರತ ನಾಶವಾಗುವುದು.

> ನಮ್ಮ ಏಕಮಾತ್ರ ಸಮಾನ ಭೂಮಿಕೆಯೆಂದರೆ ಹಿಂದಿನಿಂದ ಬಂದ ಪವಿತ್ರ ಪರಂಪರೆ ಮತ್ತು ಧರ್ಮ. ಅದೊಂದೇ ಏಕಮಾತ್ರ ಸಾಧಾರಣ ಭೂಮಿ. ಅದರ ಮೇಲೆ ಮಾತ್ರ ನಮ್ಮ ರಾಷ್ಟ್ರವನ್ನು ನಿರ್ಮಿಸುವುದು ಸಾಧ್ಯ.
>
> *—ಸ್ವಾಮಿ ವಿವೇಕಾನಂದ*

## ಧರ್ಮ—ಎಲ್ಲರಿಗೂ ಆವಶ್ಯಕ

ಸ್ವಾಮೀಜಿಯವರ ಕಾಲದಲ್ಲಿ ಧರ್ಮವೆಂದರೆ ಜಾತಿಧರ್ಮವಾಗಿತ್ತು. ಹಿಂದೂಧರ್ಮಗ್ರಂಥಗಳಾದ ಭಗವದ್ಗೀತೆ, ಉಪನಿಷತ್ತುಗಳನ್ನು ಇತರರು ಓದಕೂಡದೆಂದು ಉಚ್ಚವರ್ಗದವರು ಬೇಲಿ ಹಾಕಿದ್ದರು. ಯಾರಿಗೆ ಜೀವನದಲ್ಲಿ ಇವನ್ನು ಅಧ್ಯಯನ ಮಾಡಲು ಅವಕಾಶವಿತ್ತೋ ಅವರು, ಅದರ ಸಾರವನ್ನು ಅಧ್ಯಯನ ಮಾಡಲು ಅವಕಾಶವಿಲ್ಲದ ಶ್ರಮಜೀವಿಗಳು, ವ್ಯಾಪಾರಿಗಳು ಮುಂತಾದವರಿಗೆ ವಿವರಿಸಬೇಕಾದ ತಮ್ಮ ಕರ್ತವ್ಯವನ್ನು ಮರೆತು ತಾವೇ ಅದರ ಮಾಲೀಕರೆಂದು ತಪ್ಪಾಗಿ ಭಾವಿಸಿದ್ದರು. ಹೆಂಗಸರಂತೂ ಅವನ್ನು ಓದಲೇಕೂಡದು. ವಿದ್ಯಾಭ್ಯಾಸವೇ ಇಲ್ಲದ ಹೆಂಗಸರು ಅವನ್ನು ಹೇಗೆ ಓದಿಯಾರು? ಇಷ್ಟಲ್ಲದೆ ಅನ್ಯಧರ್ಮೀಯರು ಹಿಂದೂಗಳನ್ನು ಮತಾಂತರಗೊಳಿಸುವ ಮತ್ತು ಹಿಂದೂಧರ್ಮದ ದೋಷಗಳನ್ನು ಎತ್ತಿಹಿಡಿಯುವ ಪ್ರಯತ್ನ ಮಾಡುತ್ತಿದ್ದರು. ವಿದ್ಯಾಭ್ಯಾಸ ಪಡೆದ ಯುವಕರು ವೇಷಭೂಷಣಗಳು, ನಡವಳಿಕೆ, ಆಲೋಚನೆ ಎಲ್ಲದರಲ್ಲಿಯೂ ಪಾಶ್ಚಾತ್ಯರನ್ನು ಅನುಕರಿಸುತ್ತಾ ಭಾರತೀಯ ಧರ್ಮ, ಸಂಪ್ರದಾಯಗಳನ್ನು ಕೀಳಾಗಿ ನೋಡುವುದರಲ್ಲಿಯೂ ಪಾಶ್ಚಾತ್ಯರನ್ನು ಅನುಕರಿಸುತ್ತಿದ್ದರು. ಯಾರು ಧರ್ಮಾಚಾರಪರಾಯಣರಾಗಿದ್ದರೊ ಅವರು ತಮ್ಮನ್ನು ಉತ್ತಮರೆಂದು ಭಾವಿಸಿ, ನಾವು ಮಡಿ ನಮ್ಮನ್ನು ಮುಟ್ಟಬೇಡಿ ಎಂದು ಹೇಳುತ್ತಾ ಅದನ್ನೇ ತಮ್ಮ ಧರ್ಮವೆಂದು ನಂಬಿದ್ದರು. ಕೆಲವು ಕ್ಷುಲ್ಲಕ ಬಾಹ್ಯಾಚಾರಗಳ ವಿಮರ್ಶೆಯೇ ಧರ್ಮದ ಪರಾಕಾಷ್ಠೆ ಎಂದು ಭಾವಿಸಿದ್ದರು. ಪಾಶ್ಚಾತ್ಯರು ಹಿಂದೂಗಳನ್ನು ಕೀಳಾಗಿ ಕಾಣುವುದಕ್ಕೂ, ಹಿಂದೂ ಸಮಾಜದ ಉಚ್ಚವರ್ಗದವರು ಇತರರನ್ನು ಶೋಷಣೆ ಮಾಡುವುದಕ್ಕೂ ಸಾಮಾನ್ಯ ಕಾರಣ, ಹಿಂದೂಧರ್ಮವನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದು.

ಸ್ವಾಮಿ ವಿವೇಕಾನಂದರು ಪಾಶ್ಚಾತ್ಯರು ಮತ್ತು ಹಿಂದೂಗಳು, ಇಬ್ಬರಿಗೂ ಹಿಂದೂಧರ್ಮವನ್ನು ಸರಿಯಾಗಿ ಬೋಧಿಸಿ ಅವರ ಮತಭ್ರಾಂತಿಗಳನ್ನು ಖಂಡಿಸಿದರು. ರಾಮಕೃಷ್ಣ ಮಿಷನ್ ಸೇರಿದ ಬ್ರಹ್ಮಚಾರಿ ಮತ್ತು ಸಂನ್ಯಾಸಿಗಳಿಗೆ, ಗೀತೆ ಮತ್ತು ಉಪನಿಷತ್ತುಗಳನ್ನು ಅಧ್ಯಯನ ಮಾಡಿ, ಸರಳವಾದ ದೇಶಭಾಷೆಯಲ್ಲಿ ಅವುಗಳ ಸಾರವನ್ನು ಸಾಮಾನ್ಯ ಜನರಿಗೆ ತಿಳಿಯಹೇಳಬೇಕೆಂದು ಸ್ವಾಮೀಜಿಯವರು ವಿಧಿಸಿದರು. ಧರ್ಮಗ್ರಂಥಗಳು ಸಂಸ್ಕೃತ ಭಾಷೆಯಲ್ಲಿದ್ದುದರಿಂದ ಅವು ಪಂಡಿತರ ಸ್ವತ್ತಾಗಿದ್ದುವು. ಅವರು ಹೇಳಿದುದನ್ನೇ ಸಾಮಾನ್ಯರು ಸ್ವೀಕರಿಸಬೇಕಾಗಿತ್ತು. ಸರಳ ಶೈಲಿಯಲ್ಲಿ ದೇಶೀಯ ಭಾಷೆಗಳಲ್ಲಿ ಧರ್ಮ ಮತ್ತು ಆಧ್ಯಾತ್ಮಿಕ ಗ್ರಂಥಗಳನ್ನು ಬರೆದು ಪ್ರಕಟಿಸುವಂತೆ ಪ್ರೇರೇಪಿಸುವುದರ ಮೂಲಕ ಸ್ವಾಮೀಜಿ ಧಾರ್ಮಿಕ ಭಾವನೆಗಳು ಜನಸಾಮಾನ್ಯರಲ್ಲಿ ಹರಡುವಂತೆ ಮಾಡಿದರು. ಈಗಲೂ ಸಾವಿರಾರು ಗ್ರಂಥಗಳು ರಾಮಕೃಷ್ಣ ಆಶ್ರಮಗಳ ಮೂಲಕ ಪ್ರಕಟವಾಗುತ್ತಿದ್ದು ಒಂದು ಅಪೂರ್ವ ಆಧ್ಯಾತ್ಮಿಕ ಸೇವೆ ನಡೆಯುತ್ತಿದೆ.

ಸಂನ್ಯಾಸಿಗಳ ಕೆಲಸ ಕೇವಲ ಪಾದಪೂಜೆ, ಪಲ್ಲಕ್ಕಿ ಉತ್ಸವಗಳನ್ನು ಮಾಡಿಸಿಕೊಂಡು ಪೀಠಾಧಿಪತಿಗಳಾಗಿರುವುದಲ್ಲ. ಗೃಹಸ್ಥರಿಂದ ಧನಧಾನ್ಯಗಳನ್ನು ಸ್ವೀಕರಿಸಿ ತಮ್ಮ ಮೋಕ್ಷಕ್ಕಾಗಿ ಶ್ರಮಿಸುವುದಲ್ಲ. ಸಮಾಜದ ಋಣವನ್ನು ಸೇವೆಯ ಮೂಲಕ ಹಿಂತಿರುಗಿಸಬೇಕು. ದೀನದರಿದ್ರರಲ್ಲಿ ನಾರಾಯಣನನ್ನು ಕಾಣುತ್ತ ಅವರ ಸೇವೆ ಮಾಡ ಬೇಕು. ಶಾಲೆ ಮತ್ತು ಆಸ್ಪತ್ರೆಗಳನ್ನು ನಡೆಸಬೇಕು. ಕ್ಷಾಮ, ಪ್ರವಾಹ, ಪಿಡುಗು ಮುಂತಾದ ಉಪದ್ರವಗಳು ತಲೆದೋರಿದಾಗ ಸಂನ್ಯಾಸಿಗಳು ಪರಿಹಾರಕಾರ್ಯದಲ್ಲಿ ತೊಡಗಬೇಕು. ಸಂನ್ಯಾಸಿಗಳು ಸಮಾಜದ ಮಧ್ಯದಲ್ಲಿದ್ದು ಸಮಾಜಕ್ಕಾಗಿ ದುಡಿಯುತ್ತ ಸಂನ್ಯಾಸಧರ್ಮದಂತೆ ನಡೆದುಕೊಳ್ಳಬೇಕೆಂದು ಕಠಿಣ ಜೀವನವನ್ನು ವಿಧಿಸುತ್ತ ಸ್ವಾಮೀಜಿಯವರು ಹೊಸ ಸಂನ್ಯಾಸಧರ್ಮ ಮತ್ತು ಸಂನ್ಯಾಸಿ-ಸಂಘ-ಜೀವನವನ್ನು ಜಾರಿಗೆ ತಂದರು. ಭಕ್ತಿಯ ಅತಿರೇಕದಿಂದ ದೇಶ ದುರ್ಬಲವಾಗಿದೆ. ದೇಶದ ಏಳಿಗೆಗಾಗಿ ಜನರು ಕಷ್ಟಪಟ್ಟು ದುಡಿಯಬೇಕಾಗಿದೆ. ನಮಗೆ ಬೇಕಾಗಿರುವುದು ಭಗವದ್ಗೀತೆಯ ಶ್ರೀಕೃಷ್ಣ; ಬೃಂದಾವನದ ಶ್ರೀಕೃಷ್ಣನಲ್ಲ ಎಂದು ಸ್ವಾಮೀಜಿಯವರು ಕರ್ಮದ ಆವಶ್ಯಕತೆಯನ್ನು ಒತ್ತಿ ಹೇಳಿದರು.

## ಸ್ತ್ರೀಯರ ಉದ್ಧಾರ

ರಾಷ್ಟ್ರನಿರ್ಮಾಣಕ್ಕೆ ಸ್ವಾಮೀಜಿಯವರ ಇನ್ನೊಂದು ಅಮೂಲ್ಯ ಕೊಡುಗೆ, ಸ್ತ್ರೀಯರ ಉದ್ಧಾರ. ಸ್ತ್ರೀಯರು ದೇಶದ ಅರ್ಧ ಭಾಗ. ಭರತಖಂಡದ ಶ್ರೇಷ್ಠತೆ, ಅವರ ತ್ಯಾಗ ಮತ್ತು ಶೀಲದ ಮೇಲೆ

ನಿಂತಿರುವುದು. ಅವರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವರಿಗೆ ಸಾಮರ್ಥ್ಯವಿರುವುದು. ಅದನ್ನು ಮಾಡಲು ಅವರನ್ನು ಬಿಡಬೇಕಷ್ಟೆ. ಪುರುಷರು ಅವರಲ್ಲಿ ತಲೆಹಾಕದೆ ದೂರದಿಂದ ಮಾತ್ರ ಸಹಾಯ ಮಾಡಬೇಕು ಎಂದು ಸ್ವಾಮೀಜಿ ಬುದ್ಧಿ ಹೇಳಿದರು. ಸ್ತ್ರೀಯರಿಗೆ ವಿದ್ಯಾಭ್ಯಾಸದ ಅನುಕೂಲವನ್ನು ಮಾಡಿಕೊಡುವುದಷ್ಟೆ, ನಮ್ಮ ಕೆಲಸ. ಅವರಿಗೆ ಒಳ್ಳೆಯದು ಯಾವುದೆಂಬುದನ್ನು ಅವರೇ ನಿರ್ಣಯಿಸುವರೆಂದು ಹೇಳಿದರು. ಭಾರತದಲ್ಲಿ ಸ್ತ್ರೀಯರ ವಿದ್ಯಾಭ್ಯಾಸ ಮತ್ತು ಪ್ರಗತಿಗಾಗಿಯೇ ಜನ್ಮವೆತ್ತಂತೆ ಕಾಣುವ ಮಾರ್ಗರೆಟ್ ನೊಬೆಲ್ ಎಂಬ ಐರ್ಲೆಂಡಿನ ಮಹಿಳೆ ಸ್ವಾಮಿ ವಿವೇಕಾನಂದರನ್ನು ಇಂಗ್ಲೆಂಡಿನಲ್ಲಿ ಭೇಟಿಯಾಗಿ ಅವರ ಕಾರ್ಯದಲ್ಲಿ ನೆರವಾಗುವುದಕ್ಕೆ ಕಂಕಣಬದ್ಧರಾಗಿ ಭಾರತಕ್ಕೆ ಬಂದರು. ಇವರು ಸೋದರಿ ನಿವೇದಿತಾ ಎಂಬ ಅಭಿದಾನದಿಂದ ತಮ್ಮ ಇಡೀ ಜೀವನವನ್ನು ಭಾರತದ ಸೇವೆಯಲ್ಲಿ ಕಳೆದರು. ಕಲ್ಕತ್ತದಲ್ಲಿ ಬಾಲಕಿಯರ ಶಾಲೆಯನ್ನು ಪ್ರಾರಂಭಿಸಿದರು. ಇದು ಇಡೀ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ನಾಂದಿಯಾಯಿತು.

## ವಿದ್ಯಾಭ್ಯಾಸ—ಸಕಲರೋಗ ನಿವಾರಕ

ಸ್ವಾಮೀಜಿಯವರ ಕಾಲದಲ್ಲಿ ವಿದ್ಯಾಸಂಸ್ಥೆಗಳನ್ನು ತೆರೆಯುವುದಾಗಲಿ ನಡೆಸುವುದಾಗಲಿ ಅಷ್ಟು ಸುಲಭವಾಗಿರಲಿಲ್ಲ. ಇದ್ದ ಕೆಲವು ಸಂಸ್ಥೆಗಳು ಬ್ರಿಟಿಷ್ ಸರಕಾರದ ಛತ್ರಛಾಯೆಯಲ್ಲಿದ್ದುವು. ಆದರೆ ಸ್ವಾಮೀಜಿಯವರು ವಿದ್ಯಾಭ್ಯಾಸದ ಬಗ್ಗೆ ತಿಳಿಯಹೇಳಿದ ಆದರ್ಶ ವಾಕ್ಯಗಳಿಂದ ಪ್ರಭಾವಿತರಾದ ಅನೇಕ ದೇಶಭಕ್ತರು ನಂತರ ಆದರ್ಶ ವಿದ್ಯಾಲಯಗಳನ್ನು ಸ್ಥಾಪಿಸಿದರು. ಹೀಗೆ ಸ್ವಾಮೀಜಿಯವರು ರಾಷ್ಟ್ರನಿರ್ಮಾಣಕ್ಕೆ ವಿದ್ಯಾಭ್ಯಾಸದ ಕೊಡುಗೆಯನ್ನು ನೀಡಿದರು. ವಿದ್ಯಾಭ್ಯಾಸ ಮಾಡುವುದೆಂದರೆ ಹಲವಾರು ವಿಷಯಗಳ ಉಗ್ರಾಣವಾಗುವುದೆಂದಲ್ಲ. ಅದರಿಂದ ವ್ಯಕ್ತಿಗಳ, ದೇಶದ ಜೀವನ ವಿಕಾಸವಾಗಬೇಕು. ನಮ್ಮ ದೇಶದ ಎಲ್ಲ ಸಮಸ್ಯೆಗಳಿಗೂ ಪರಿಹಾರ ವಿದ್ಯಾಭ್ಯಾಸದಲ್ಲಿರುವುದು ಎಂದು ಸ್ವಾಮೀಜಿಯವರು ಸಾರಿದರು.

## ಕೆಲವು ಸಾಮಾಜಿಕ ಸಮಸ್ಯೆಗಳು

ಸ್ವಾಮೀಜಿಯವರ ಕಾಲದಲ್ಲಿ ಜಾತಿ, ಚಾತುರ್ವರ್ಣ್ಯ, ಉಚ್ಚ-ನೀಚ ವರ್ಗ ಮುಂತಾದ ಕೆಲವು ಸಾಮಾಜಿಕ ಸಮಸ್ಯೆಗಳು ರಾಷ್ಟ್ರದ ಬೆಳವಣಿಗೆಗೆ ಹಾನಿಕರವಾಗಿದ್ದುವು. ಈ ಸಮಸ್ಯೆಗಳು ಈಗ ಇಲ್ಲವೆಂದಲ್ಲ. ಆಗ ಅವು ತೀವ್ರತರವಾಗಿದ್ದುವು. ಅನೇಕ ಸುಧಾರಕ ಮಹಾಶಯರು ಇವನ್ನು ಕೆಣಕಲು ಹೋಗಿ ಅವುಗಳ ಕೆಸರಿನಲ್ಲಿ ಸಿಕ್ಕು ಬಿದ್ದಿರುವರು, ಇಲ್ಲವೇ ಅವನ್ನು ಉಲ್ಬಣಗೊಳಿಸಿರುವರು. ಸ್ವಾಮೀಜಿಯವರು ಹಿಂದೂಸಮಾಜವನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದ ಆಧ್ಯಾತ್ಮಿಕ ಜೀವಿಗಳಾಗಿದ್ದುದರಿಂದ ಅವನ್ನು ವಿಶ್ಲೇಷಿಸಿ ಸಲಹೆಗಳನ್ನು ಸೂಕ್ಷ್ಮರೀತಿಯಲ್ಲಿ ಸೂಚಿಸಿ ಭವಿಷ್ಯವಾಣಿ ನುಡಿದರು. ವರ್ಣಗಳು—ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ—ಎಲ್ಲ ಸಮಾಜದಲ್ಲಿಯೂ ಎಲ್ಲ ಕಾಲದಲ್ಲಿಯೂ ಇರುವುವು. ಅವು ಸಮಾಜದ ಕ್ಷೇಮಕ್ಕೆ ಆವಶ್ಯಕ. ಹಿಂದೂ ಸಮಾಜದಲ್ಲಿ ಹೇಗೋ ಅವು ಕಾಲಕ್ರಮದಲ್ಲಿ ಜಾತಿಯ ರೂಪವನ್ನು ತಾಳಿದವು. ಯಾವ ವ್ಯಕ್ತಿಯೂ ಒಂದು ವರ್ಣ ಅಥವಾ ತತ್ತ್ವಕ್ಕೆ ಹುಟ್ಟಲು ಸಾಧ್ಯವಿಲ್ಲ. ವ್ಯಕ್ತಿ ವಿಕಾಸವಾದಂತೆ, ಸಂಸ್ಕಾರಕ್ಕನುಗುಣವಾಗಿ ಆಯಾ ವರ್ಣಗಳಿಗೆ ಸೇರುವನು. ಸ್ವಾಮೀಜಿಯವರ ಕಾಲದಲ್ಲಿ ಶ್ರಮಜೀವಿಗಳು (ಶೂದ್ರರು) ನಿರ್ಲಕ್ಷ್ಯಕ್ಕೆ ಗುರಿಯಾಗಿದ್ದರು. ಉಳಿದ ವರ್ಣಗಳ ಕ್ಷೇಮಕ್ಕೆ, ಸಮಾಜದ ಅಭ್ಯುದಯಕ್ಕೆ ಅವರು ಇತರ ವರ್ಣದವರಷ್ಟೇ ಕಾರಣರು. ಇತರ ವರ್ಣದವರು ಅವರಿಗೆ ಸಹಾಯಹಸ್ತವನ್ನು ನೀಡಿ ನಮ್ಮ ಧರ್ಮದ, ದೇಶದ ಅನರ್ಘ್ಯ ತತ್ತ್ವರತ್ನಗಳಾದ ಗೀತೆ, ಉಪನಿಷತ್ತುಗಳ ಸಾರವನ್ನು ಅವರಿಗೂ ತಲಪುವಂತೆ ಮಾಡಿದರೆ ದೇಶದ ಏಳಿಗೆಯಾಗುವುದು ಎಂದು ಸ್ವಾಮೀಜಿಯವರು ಸ್ಪಷ್ಟವಾಗಿ ತಿಳಿಸಿದರು. ಅಷ್ಟೇ ಅಲ್ಲ, ಇನ್ನು ಮುಂದೆ ಶೂದ್ರಶಕ್ತಿ (labour force) ಜಗತ್ತನ್ನು ಆಳುವುದು ಎಂದು ಭವಿಷ್ಯವಾಣಿ ನುಡಿದರು. ಕಾರ್ಮಿಕರ ಹಕ್ಕು, ನ್ಯಾಯಾಂಗ (labour rights and laws) ಮುಂತಾದವು ನಂತರ ಬಂದುವು. ಹೀಗೆ ಸ್ವಾಮೀಜಿಯವರ ಆಲೋಚನಾತರಂಗ ಎಷ್ಟೋ ಕ್ಷೇತ್ರಗಳಲ್ಲಿ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಪ್ರೇರಕ, ಕಾರಕ ಶಕ್ತಿಯಾಗಿ ಕೆಲಸ ಮಾಡಿವೆ ಮತ್ತು ಮಾಡುತ್ತಿವೆ.

> ನಮ್ಮಲ್ಲಿನ ಮನುಷ್ಯತ್ವದ ಪೂರ್ಣ ಜಾಗೃತಿಗೆ ವಿವೇಕಾನಂದರ ಸಂದೇಶ ಕರೆ ನೀಡಿತು. ಇದರಿಂದಾಗಿ ನಮ್ಮ ಅನೇಕ ಯುವಕರು ಕೆಲಸದ ಮೂಲಕ, ತ್ಯಾಗ ಆತ್ಮಾರ್ಪಣೆಯ ಮೂಲಕ ವಿವಿಧ ರೀತಿಯಲ್ಲಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡಿದರು.
>
> *—ರವೀಂದ್ರನಾಥ ಟಾಗೂರ್*

## ಕೊನೆಯ ಮಾತು

ರಾಷ್ಟ್ರನಿರ್ಮಾಣ ಒಂದು ದಿನದ, ಕೆಲಸವಲ್ಲ. ಅದು ನಿರಂತರವಾಗಿ ನಡೆಯಬೇಕಾದುದು. ಕಾಲಪ್ರವಾಹದಲ್ಲಿ ಒಂದು ಸಮಯದಲ್ಲಿ ಅವತರಿಸಿದ ಸ್ವಾಮಿ ವಿವೇಕಾನಂದರು ತಮ್ಮ ಅಲ್ಪ ಜೀವಿತಕಾಲದಲ್ಲಿ ಹಲವು ಶತಮಾನಗಳ ಕಾಲ ಮುಂದುವರಿಯುವಂತಹ ರಾಷ್ಟ್ರನಿರ್ಮಾಣ ಕಾರ್ಯಗಳಿಗೆ ಪ್ರೇರಕ ಶಕ್ತಿಯಾದರು. ಅವರು ಹಾಕಿದ ಎಷ್ಟೋ ರಾಷ್ಟ್ರನಿರ್ಮಾಣ ಕಾರ್ಯದ ಬೀಜಗಳು ಚಿಗುರಿ, ವಿಶಾಲವೃಕ್ಷದಂತೆ ಬೆಳೆದುವು. ಸ್ವಾಮೀಜಿಯವರ ಕಾಲದಲ್ಲಿ ಇದ್ದ ಎಲ್ಲ ಕ್ಷೇತ್ರಗಳ ಪ್ರತಿಷ್ಠಿತ, ಪ್ರತಿಭಾನ್ವಿತ, ಪ್ರಭಾವಶಾಲಿ ವ್ಯಕ್ತಿಗಳು ಸ್ವಾಮೀಜಿಯವರ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಅವರಿಂದ ಪ್ರಭಾವಿತರಾಗಿ ಮುಂದೆ ನಡೆದ ರಾಷ್ಟ್ರನಿರ್ಮಾಣ ಕಾರ್ಯಕರ್ತರಿಗೆ ಪ್ರಚೋದಕರಾದರು.

ಸ್ಥಳದಾನ: ಗಾಡ್ ಗಿಫ್ಟ್ಸ್, ಬೆಂಗಳೂರು